ಆ) ಹೌದು. 1994-95ನೇ ಸಾಲಿನಲ್ಲಿ.

ಇ) ಇಲ್ಲ.

ಈ) ಪ್ರಶ್ನೆಯಿಲ್ಲ.

ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಕಾಲೇಜುಗಳ

742 - ಶ್ರೀ ಕ. ಜಯರಾಮ ಶೆಟ್ಟಿ (ಬುಳ್ಳಾಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ವಿಶ್ವ ವಿದ್ಯಾಲಯದ ಅಧೀನದಲ್ಲಿ ಬರುವ ವಿವಿಧ ಕಾಲೇಜುಗಳ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು, (ವಿವರ ನೀಡುವುದು)

ಆ) ವಿಶ್ವವಿದ್ಯಾಲಯಗಳ ಅನುದಾನ ಆಯೋಗ ನೀಡಿರುವ ಮಾರ್ಗದರ್ಶಿ ಸೂತ್ರದಂತೆ ಈ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರು, ಪ್ರವಚನಕಾರರ ಉಪನ್ಯಾಸಕಾರರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ; (ಇದ್ದರೆ ಮಾರ್ಗದರ್ಶಿ ಸೂತ್ರವೇನು ಹಾಗೂ ನೇಮಕಾತಿಗಳ ವಿವರ ನೀಡುವುದು)

ಇ) ಈ ವಿಶ್ವವಿದ್ಯಾಲಯದಲ್ಲಿ ಸ್ಥಾಪಿತವಾಗಿರುವ ಪ್ರತಿಷ್ಠಿತ ಶಿವರಾಮ್ ಕಾರಂತ್ ಪೀಠದಲ್ಲಿ ಕಾರ್ಯಕ್ರಮಗಳು ನಡೆಯುವಂತಾಗಲು ಸರ್ಕಾರ ಎಷ್ಟು ಅನುದಾನ ಬಿಡುಗಡೆ ಮಾಡಿದೆ ಹಾಗೂ ಈ ಪೀಠದಲ್ಲಿ ಇದುವರೆಗೆ ಏನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ?

ಈ) ದಕ್ಷಿಣ ಕನ್ನಡ ಜಿಲ್ಲೆಯ ವೈಶಿಷ್ಟ್ಯಪಾದ ಕಲೆ, ಯಕ್ಷಗಾನ, ಭೂತರಾಧನೆ, ಕಂಬಳ ಇತ್ಯಾದಿಗಳ ಯಕ್ಷಗಾನ ಪೀಠವನ್ನು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಸ್ಥಾಪನೆ ಮಾಡುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ)	**ಕಾಲೇಜುಗಳ ವಿವರ**	**ಸಂಖ್ಯೆ**
1)	ಕಲೆ ವಾಣಿಜ್ಯ ವಿಜ್ಞಾನ ಬಿಬಿಎಂ ಬಿಎಸ್‌ಡಬ್ಲ್ಯೂ ಪದವಿ ಕಾಲೇಜುಗಳು	67
2)	ಶಿಕ್ಷಣ ಕಾಲೇಜುಗಳು	4
3)	ಇಂಜಿನಿಯರಿಂಗ್ ಕಾಲೇಜುಗಳು	4
4)	ಕಾನೂನು ಕಾಲೇಜುಗಳು	5
5)	ಹೋಟೆಲ್ ಮ್ಯಾನೇಜ್‌ಮೆಂಟ್	

	ಕಾಲೇಜುಗಳು	7
6)	ಮಡಿಕಲ್ ಕಾಲೇಜು (ಸ್ನಾತಕೋತ್ತರ ಕೋರ್ಸ್)	1
7)	ಹೂವಲ್ ಕಾಲೇಜುಗಳು	3
8)	ನರ್ಸಿಂಗ್ ಕಾಲೇಜುಗಳು	6
9)	ಫಾರ್ಮಸಿ ಕಾಲೇಜುಗಳು	2
10)	ದಂತವೈದ್ಯಕೀಯ ಮತ್ತು ಯೋಜಿಕ್ ಸಾಯನ್ಸ್ ಕಾಲೇಜು	1
11)	ಹೋಮಿಯೋಪತಿ ಕಾಲೇಜು	1
12)	ಆಯುರ್ವೇದಿಕ್ ಕಾಲೇಜು	1
13)	ಪಿಸಿಯೋಥೆರಪಿ ಕಾಲೇಜುಗಳು	9

ಆ) ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾರ್ಗದರ್ಶಿಯ ಸೂತ್ರಗಳು 1991 ಮತ್ತು ತದನಂತರದ ತಿದ್ದುಪಡಿಗಳಿಗನುಸಾರವಾಗಿ ವಿಶ್ವವಿದ್ಯಾಲಯವು ಅನುಶಾಸನ ಮಾಡಿರುವ ಸರ್ಕಾರ ನಿಗಧಿಪಡಿಸಿದ ಮೀಸಲಾತಿ ನಿಯಮಗಳಿಗನುಸಾರವಾಗಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ 1995-96ರ ಸಾಲಿನಲ್ಲಿ ಈ ಕೆಳಗಿನ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

1) ಪ್ರಾಧ್ಯಾಪಕರು - 10

2) ಪ್ರವಾಚಕರು - 23

3) ಉಪನ್ಯಾಸಕರು - 26

ಇ) ಈ ವಿಶ್ವವಿದ್ಯಾಲಯದಲ್ಲಿ 1993-94ನೇ ಸಾಲಿನಲ್ಲಿ ಸ್ಥಾಪಿತವಾಗಿರುವ ಪ್ರತಿಷ್ಠಿತ ಶಿವರಾಮ ಕಾರಂತ ಪೀಠದಲ್ಲಿ ಕಾರ್ಯಕ್ರಮಗಳು ನಡೆಯುವಂತಾಗಲು ಸರ್ಕಾರ 1994ರಲ್ಲಿ 5 ಲಕ್ಷ ರೂ. ಬಿಡುಗಡೆ ಮಾಡಿತ್ತು.

1) ಡಾ॥ ಶಿವರಾಮಕಾರಂತರ ಅಪ್ರಕಟಿತ ಬಿಡಿ ಲೇಖನಗಳನ್ನು ಎಂಟು ಸಂಪುಟಗಳಲ್ಲಿ ಮುದ್ರಿಸಿ ಪ್ರಕಟಿಸಿದೆ.

2) ಡಾ॥ ಶಿವರಾಮಕಾರಂತರಿಗೆ ಸಂಬಂಧಿಸಿದ 82 ವರ್ಕ್ಸ್ 15 ಮೆನ್ಯುಸ್ಕ್ರಿಪ್ಟ್ಸ್ 1380 ಬ್ಲಾಕ್ ಅಂಡ್ ವಾಟ್ ಫೋಟೋಗ್ರಾಫ್ಸ್ 320 ಕಲರ್ ಫೋಟೋಗ್ರಾಫ್ 229 ಸ್ಲೈಡ್ಸ್ 100 ನಗಿಪಿಪ್ 10 ಮೀಡಿಯಾ ಕ್ಯಾಸೆಟ್‌ಗಳು 20 ಆಡಿಯೋ ಕ್ಯಾಸೆಟ್‌ಗಳು ಸ್ಥಾನೀಕರಣಗಳು

ಮೊಮೆಂಟೂಗಳು ಮತ್ತು ಎವಾರ್ಡುಗಳನ್ನು ಕಲಕ್ಕೆ ಮಾಡಿ ಇರಲಾಗಿದೆ.

3) ಡಾ॥ ಕಾರಂತರ ಮನೆಯಲ್ಲಿ ಮತ್ತು ಉಡುಪಿಯಲ್ಲಿ ಗೀತ ನಾಟಕಗಳ ಮತ್ತು ಯಕ್ಷಗಾನ ಹಾಡುಪಿಕೆ ಮತ್ತು ಪಾತ್ರಕ್ಕಿಕ್ಕಗಳ ಆಡಿಯೋ ಮತ್ತು ವಿಡಿಯೋಗಳ ಕ್ಯಾಸೆಟುಗಳನ್ನು ಕಾರಂತ ಪೀತವ ಸದಸ್ಯರಿಂದ ತಯಾರಿಸಿದೆ.

ಈ) ಇಲ್ಲ.

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ದುರಸ್ಥಿ

743 - ಶ್ರೀ ಇ. ಮಾರುತಿರಾವ್ ಪವರ್ (ನರಸಿಂಹರಾಜ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಸರ್ಕಾರಿ ಶವಾಗಾರವು ಹೊಸ ಕಟ್ಟಡಕ್ಕೆ ಬದಲಾವಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಟ್ಟಡದಲ್ಲಿ ಶವಗಳು ಕೆಡದಂತೆ ಇಡಲು ಶೈತ್ಯಾಗಾರ ಇಲ್ಲವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ತಕ್ಷಣ ಇವರ ವ್ಯವಸ್ಥೆ ಮಾಡಲು ಸರ್ಕಾರದವರ ಕ್ರಮ ಕೈಗೊಳ್ಳುವರೇ?

ಶ್ರೀ ವಿ.ಪಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು.

ಇ) ಈಗಾಗಲೇ ಶೈತ್ಯಾಗಾರ ಯಂತ್ರಗಳನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿದ್ದು ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯ ನಡೆಯುತ್ತಿದ್ದು ಸದ್ಯದಲ್ಲಿಯೇ ಈ ಸೇವೆಯನ್ನು ಪ್ರಾರಂಭಿಸಲಾಗುವುದು.

ವಿದ್ಯಾರ್ಥಿಗಳ ಸುಳ್ಳು ದಾಖಲಾತಿ ನೀಡಿ ಸರ್ಕಾರದ ಹಣಕ್ಕೆ ವಂಚಿಸುತ್ತಿರುವ ಶಿಕ್ಷಣ ಸಂಸ್ಥೆಗಳು

744 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿದ್ಯಾರ್ಥಿಗಳ ಸುಳ್ಳು ಮಾಹಿತಿಗಳನ್ನು ನೀಡಿ ಸರ್ಕಾರದ ಧನ ಸಹಾಯವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಎಂಟು ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ರದ್ದುಪಡಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಆ ಶಿಕ್ಷಣ ಸಂಸ್ಥೆಗಳ ಹೆಸರುಗಳೇನು? ದುರುಪಯೋಗವಾದ ಹಣವನ್ನು ವಸೂಲು ಮಾಡಲಾಗಿದೆಯೇ?